ಈ ಅನ್ಯಾಯವನ್ನು ಮಾನ್ಯ ಉನ್ನತ ಶಿಕ್ಷಣ ಸಚಿವರು ವಿಚಾರಣೆ ಮಾಡಿ ಕಾನೂನಿನ ಪ್ರಕಾರ ಸರಿಪಡಿಸಬೇಕೆಂದು ಒತ್ತಾಯಪೂರ್ವಕವಾಗಿ ಕೋರುತ್ತಾ, ಈ ಸದನದಲ್ಲಿ ಹೇಳಿಕೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ರಘುಪತಿ.—ಸಂಬಂಧಪಟ್ಟ ಸಚಿವರಿಂದ ಹೇಳಿಕೆ ಕೊಡಿಸುವುದಕ್ಕೆ ಏರ್ಪಾಡು ಮಾಡುತ್ತೇನೆ.

೧೭ ಚಿಂಚೋಳಿ ತಾಲ್ಲೂಕಿನ ಅರಣ್ಯ ಹಾಗೂ ವನ್ಯಸಂಪತ್ತನ್ನು ಸಂರಕ್ಷಿಸುವುದು.

ಶ್ರೀ ಎಂ. ವೀರಯ್ಯಸ್ವಾಮಿ.—ಮಾನ್ಯ ಅಧ್ಯಕ್ಷರೇ, ಕಲ್ಬುರ್ಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬೃಹತ್ ಅರಣ್ಯ ಪ್ರದೇಶವಿದ್ದು. ನಮ್ಮ ರಾಜ್ಯದ ಇಡೀ ಉತ್ತರ ಭಾಗದಲ್ಲಿ ಅತಿ ದೊಡ್ಡ ಮತ್ತು ದಟ್ಟವಾದ ಅರಣ್ಯ ಇದಾಗಿದೆ. ಅರಣ್ಯದ ಬಹಳಷ್ಟು ಭಾಗದಲ್ಲಿ ಈಗಲೂ ಅನೇಕ ಕಾಡು ಮೃಗಗಳು ವಾಸಿಸುತ್ತವೆ. ಕೆಲವು ವರ್ಷಗಳ ಹಿಂದೆ ಕುರಿ ಮಂತ್ತು ಚಿರತೆಗಳೂ ಸಹ ಇಲ್ಲಿ ಇರುತ್ತಿದ್ದವು. ಆದರೆ ಆಂಧ್ರಪ್ರದೇಶದ ಗಡಿಗೆ ಅಂಟಿಕೊಂಡಿರುವ ಈ ಅರಣ್ಯಕ್ಕೆ ಸೂಕ್ತ ಕಾವಲು ವ್ಯವಸ್ಥೆ ಇರದ ಕಾರಣ ಅನೇಕರು ಬೇಟೆಯಾಡಿ ಹುಲಿ, ಚಿರತೆಗಳ ಸಂಖ್ಯೆ ಅತಿ ವಿರಳವಾಗಿದೆ. ಆದರೆ ಈಗಲೂ ಸಹ ಸಾವಿರಾರು ಸಂಖ್ಯೆಯಲ್ಲಿ ವಿವಿಧ ಜಾತಿಯ ಜಿಂಕೆಗಳು ಹಾಗೂ ಗುಂಪು ಗುಂಪುಗಳಲ್ಲಿ ನವಿಲುಗಳು ದಾರಿ ಹೋಕರಿಗೆ ಸಂದರ್ಶನ ಕೊಡುತ್ತವೆ. ಇದಲ್ಲದೆ, ಮೊಲ, ನರಿ ಹಾಗೂ ತೋಳಗಳು ಸಾಕಷ್ಟು ಪ್ರಮಾಣದಲ್ಲಿ ನೋಡಲು ಸಿಗುತ್ತವೆ. ಇಲ್ಲಿನ ಅರಣ್ಯ ನೈಸರ್ಗಿಕವಾಗಿ ಅತಿ ಸುಂದರವಾಗಿದ್ದು, ಇಲ್ಲಿ ಎಲ್ಲಾ ಕಾಡುಪ್ರಾಣಿಗಳಿಗೆ ಅನುಕೂಲವಾಗುವಂತೆ ಸಾಕಷ್ಟು ನದಿ ನಾಲೆಗಳು ಹಾಗೂ ಚಂದ್ರಪಳ್ಳಿ ನೀರಾವರಿ ಯೋಜನೆ ಸಹ ಆವರಿಸಿಕೊಂಡಿದೆ. ಸದರಿ ಅರಣ್ಯದಲ್ಲಿ ಹಿಂದೊಮ್ಮೆ ಜಿಂಕೆಧಾಮ ಮಂಜೂರಾಗಿತ್ತೆಂದು ತಿಳಿದುಬರುತ್ತದೆ. ಆದರೆ ಯಾವ ಕಾರಣಗಳಿಂದಾಗಿ ಈ ಯೋಜನೆಯನ್ನು ಕೈಬಿಡಲಾಗಿದೆ ತಿಳಿಯದು. ಈಗಲಾದರೂ ಸರ್ಕಾರ ಈ ಪ್ರದೇಶದಲ್ಲಿ ಜಿಂಕೆಧಾಮ ಹಾಗೂ ಹುಲಿ ಧಾಮಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಬೇಕಾಗಿ ವಿನಂತಿಸುತ್ತೇನೆ.

ಶ್ರೀ ಜಿ. ಎಸ್. ಬಾಗಲಕೋಟೆ (ಅರಣ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಚಿಂಚೋಳಿ ತಾಲ್ಲೂಕಿನಲ್ಲಿ ಅರಣ್ಯವಿರುವುದು ಹಾಗೂ ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವನ ಹಾಗೂ ವನ್ಯ ಸಂಪತ್ತು ಇರುವುದು ನಿಜ. ಹಿಂದೆ ಅಲ್ಲೊಂದು ಮುಕ್ಕಳ ವಿಹಾರಧಾಮ, ಮಂತ್ತು ಸಣ್ಣ ಮೃಗಾಲಯವನ್ನು ತೆರೆಯುವ ಪ್ರಸ್ತಾವನೆ ಇತ್ತು. ಆದರೆ ಮೃಗಾಲಯಕ್ಕೆ ಆ ಸ್ಥಳ ಅರಣ್ಯ ಪ್ರದೇಶವಾಗಿರುವುದರಿಂದ, ಸೂಕ್ತ ಸ್ಥಳವಾಗಿಲ್ಲವೆಂದು ಈ ಪ್ರಸ್ತಾವನೆಯನ್ನು ಕೈಬಿಡಲಾಯಿತು. ಈ ಪ್ರದೇಶದಲ್ಲಿ ಹುಲಿಗಳು ಅತಿ ವಿರಳವಾದ್ದರಿಂದ ಈ ಪ್ರದೇಶವು ಹುಲಿಧಾಮವನ್ನಾಗಿ ಮಾಡಲು ಸೂಕ್ತವಲ್ಲವೆಂದು ಪರಿಗಣಿಸಲಾಯಿತು. ತೋಳ, ಜಿಂಕೆ, ಮೊಲ, ನವಿಲು ಇತ್ಯಾದಿ ಪ್ರಾಣಿಗಳು ಮಾತ್ರ ಇಲ್ಲಿ ಕಾಣಿಸುತ್ತವೆ. ಈ ಪ್ರದೇಶವನ್ನು ವನ್ಯ ಪ್ರಾಣಿ ಅಭಯಾರಣ್ಯವನ್ನಾಗಿ ಘೋಷಿಸಿದಲ್ಲಿ ಈ ಪ್ರಾಣಿಗಳಿಗೆ ಹೆಚ್ಚಿನ ರಕ್ಷಣೆ ಕೊಡಬಹುದು. ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಅಧ್ಯಕ್ಷರು.—ಈಗ ಶುಕ್ರವಾರ ಶಿಷ್ಟಾಚಾರ ನಿಯಮವಾದ ಮೇರೆಗೆ ಶ್ರೀ ಬಿ. ಎಂ. ಇದಿನಬ್ಬರವರು ಕೇಳಿದ ವಿಚಾರಕ್ಕೆ ಮಾನ್ಯ ಮಂತ್ರಿಗಳು ಈಗ ಉತ್ತರ ಕೊಡುತ್ತಾರೆ.

ಶ್ರೀ ಎಂ. ರಘುಪತಿ (ಮೀನುಗಾರಿಕೆ ಮತ್ತು ಬಂದರು ಸಚಿವರು).—ಮಾನ್ಯ ಅಧ್ಯಕ್ಷರೇ ಸರ್ಕಾರದ ಅಭಿಪ್ರಾಯದ ಪ್ರಕಾರ ಮೀನಿನ ಕ್ಷಾಮದ ಪರಿಸ್ಥಿತಿ ಕಂಡುಬಾರದ ಕಾರಣ ಕಳೆದೆರಡು ವರ್ಷಗಳಲ್ಲಿ ಮೀನಿನ ಕ್ಷಾಮದ ವರ್ಷವೆಂದು ಘೋಷಿಸುವುದಿಲ್ಲ. ಹಿಂದಿನ ವರ್ಷಗಳಿಗೆ ಹೋಲಿಸಿದಲ್ಲಿ ಮೀನಿನ ಉತ್ಪಾದನೆ ಕಡಿಮೆಯಾಗಿದ್ದರೂ ಕೂಡ ಮೀನಿನ ಬೆಲೆ ಹೆಚ್ಚಿದುದಾದರಿಂದ ಬಂದ ಆದಾಯವೂ ಹೆಚ್ಚಿರುತ್ತದೆ. ಆದರೂ ಸಹ ಮೀನಿನ ಕ್ಷಾಮದ ಪರಿಸ್ಥಿತಿಯ ಕುರಿತು ಕೂಲಂಕುಷ ಅಧ್ಯಯನ ನಡೆಸಲು ಹಾಗೂ ಈ ಬಗ್ಗೆ ಸೂಕ್ತ ಶಿಫಾರಸ್ಸುಗಳನ್ನು ಮಾಡಲು ಸರ್ಕಾರವು ಮೀನುಗಾರಿಕಾ ಕಾಲೇಜಿನ ನಿರ್ದೇಶಕರಾದ ಪ್ರೊಫೆಸರ್ ಎಚ್. ಪಿ. ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿದ್ದು, ಅವರಿಂದ ವರದಿಯನ್ನು ನಿರೀಕ್ಷಿಸಲಾಗಿದೆ. ವರದಿಯು ಬಂದಕೂಡಲೇ ಇದನ್ನು

ಪರಿಶೀಲಿಸಿ ಸರ್ಕಾರವು ಸೂಕ್ತ ನಿರ್ಧಾರವನ್ನು ಕೈಗೊಳ್ಳುವುದು. ಈ ಸಮಯದಲ್ಲಿ ಮಾನ್ಯ ಸದಸ್ಯರು ಮಾಡಿರುವ ಸಲಹೆಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದು.

ದಿನಾಂಕ ೨೨ನೇ ತಾರೀಖಿನ ಷಿಷಿಳರ ನಿಯಮದ ಮೇರೆಗೆ ಶ್ರೀ ಬಾಬುರೆಡ್ಡಿ ತುಂಗಳ್ ಅವರು ಕೇಳಿದ್ದ ಪ್ರಶ್ನೆಗೆ ಉತ್ತರ.

ಶ್ರೀ ಎಂ. ರಘುಪತಿ (ಮುಖ್ಯ ಮಂತ್ರಿಗಳ ಪರವಾಗಿ).—ಮಾನ್ಯ ಅಧ್ಯಕ್ಷರೇ, ಸ್ವಾತಂತ್ರ್ಯ ಚಳುವಳಿಯಲ್ಲಿ ದೇಶಕ್ಕಾಗಿ ಹೋರಾಡಿದ ಸ್ವಾತಂತ್ರ್ಯ ಯೋಧರಿಗೆ ರಾಜ್ಯ ಹಾಗೂ ಕೇಂದ್ರ ಗೌರವ ಧನಗಳನ್ನು ನೀಡಲಾಗುತ್ತಿದೆ. ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದ ಹಲವಾರು ರಾಜ್ಯ ಗೌರವಧನ ಪಡೆಯುತ್ತಿದ್ದಾರೆಂದು ಸರ್ಕಾರಕ್ಕೆ ದೂರು ಬಂದಿದೆ. ಅಂತಹವರ ಪ್ರಕರಣಗಳಲ್ಲಿ ತನಿಖೆ ಮಾಡಲಾಗುತ್ತಿದೆ. ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರಗಳು ೧೯೪೭-೪೮ನೇ ಹೈದರಾಬಾದ್ ವಿಮೋಚನಾ ಚಳುವಳಿಯನ್ನು ಸ್ವಾತಂತ್ರ್ಯ ಚಳುವಳಿಯ ಒಂದು ಭಾಗವೆಂದು ವ್ಯಾಖ್ಯಾನಿಸಿ ಸದರಿ ಚಳುವಳಿಯಲ್ಲಿ ಭಾಗವಹಿಸಿ ಭೂಗತ ಕಾರ್ಯ ನಿರ್ವಹಿಸಿದವರಿಗೂ ಕೇಂದ್ರ ರಾಜ್ಯ ಗೌರವಧನಗಳನ್ನು ನೀಡಲಾಗುತ್ತಿದೆ. ರಾಜ್ಯ ಸರ್ಕಾರದ ನಿಯಮಾವಳಿಯಂತೆ ಹೈದರಾಬಾದ್ ವಿಮೋಚನಾ ಚಳುವಳಿಯಲ್ಲಿ ಭಾಗವಹಿಸಿದ ಸ್ವಾತಂತ್ರ್ಯ ಯೋಧರು ಅವರ ಭೂಗತ ಕಾರ್ಯದ ಬಗ್ಗೆ ಅಧಿಕೃತ ದಾಖಲೆಗಳಾದ ಬಂಧಿತ ಆಜ್ಞೆ ಅಥವಾ ಘೋಷಿತ ಅಪರಾಧಿ ಆಜ್ಞೆ ಅಥವಾ ಸ್ಥಾನಬದ್ಧ ಖೈದಿ ಆಜ್ಞೆ ಒದಗಿಸಿದ್ದ ಪ್ರಕರಣಗಳಲ್ಲಿ ರಾಜ್ಯ ಗೌರವಧನ ಮಂಜೂರು ಮಾಡಲಾಗುತ್ತಿದೆ. ಅಂತಹ ದಾಖಲೆಗಳು ದೊರಕದೇ ಇದ್ದ ಪಕ್ಷದಲ್ಲಿ ಅವರು, ಅವರಿದ್ದು ಕಾರ್ಯನಿರ್ವಹಿಸಿದ ಶಿಬಿರಾಧಿಪತಿಗಳಿಂದ ಅರ್ಹತಾಪತ್ರ ಪಡೆದು ಒದಗಿಸಿದ್ದು ಮತ್ತು ನಿಗದಿತ ದಿನಾಂಕ ಅಂದರೆ ೩೧-೧೨-೮೫ರ ಒಳಗಡೆ ಅರ್ಜಿ ಸಲ್ಲಿಸಿದಂತಹ ಪ್ರಕರಣಗಳಲ್ಲಿ ಗೌರವ ಧನ ಮಂಜೂರ್ಮಾಡಲಾಗುತ್ತಿದೆ. ಆದರೆ ಸರ್ಕಾರಿ ನಿಯಮಗಳಂತೆ ಶಿಬಿರಾಧಿಪತಿಗಳು ಎಂದರೆ ರಾಜ್ಯಮಟ್ಟದ ಸಲಹಾ ಸಮಿತಿಯು ಸೂಚಿಸಿರುವ ಮತ್ತು ಸರ್ಕಾರ ಮನ್ನಣೆ ನೀಡಿ ಆದೇಶ ಹೊರಡಿಸಿದ ಅಧಿಕೃತ ೧೮ ಮಂದಿ ಶಿಬಿರಾಧಿಪತಿಗಳಲ್ಲಿ ಸಂಬಂಧಿಸಿದ ಒಬ್ಬರಿಂದ ಅರ್ಹತಾ ಪತ್ರ ಒದಗಿಸಿದ ಪ್ರಕರಣಗಳಲ್ಲಿ ಮಾತ್ರ ರಾಜ್ಯ ಗೌರವಧನ ಮಂಜೂರು ಮಾಡಲಾಗುತ್ತಿದೆ ಈ ೧೮ ಜನರು ನಿಜವಾದ ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಆ ಕಾಲದಲ್ಲಿ ಶಿಬಿರಾಧಿಪತಿಗಳಾಗಿದ್ದವರು ಈ ೧೮ ಜನರ ಹೊರತಾಗಿ ಬೇರೆ ಯಾರೇ ಶಿಬಿರಾಧಿಪತಿಗಳೆಂದು ಅರ್ಹತಾ ಪತ್ರ ನೀಡಿದ್ದರೂ ಅಂತಹ ಪ್ರಕರಣಗಳಲ್ಲಿ ಅರ್ಜಿಗಳನ್ನು ತಿರಸ್ಕರಿಸಲಾಗುತ್ತಿದೆ

ಮೇಲ್ಕಂಡ ಚಳವಳಿಯ ಸೇನಾಪತಿಯೆಂಬ ವ್ಯಕ್ತಿ ಕಾಣಿಸಿಕೊಂಡಿದ್ದು, ರೋಣ ಹಾಗೂ ಯಲಬುರ್ಗ ತಾಲ್ಲೂಕುಗಳಲ್ಲಿನ ಸಾವಿರಾರು ಜನರಿಗೆ ಶಿಬಿರಾಧಿಪತಿಯೆಂದು ಹೇಳುತ್ತಾ, ಅರ್ಹತಾ ಪತ್ರ ನೀಡುತ್ತಿರುವ ವ್ಯಕ್ತಿ ಯಾರೆಂಬುದೂ ಸರ್ಕಾರದ ಗಮನಕ್ಕೆ ಬಂದಿಲ್ಲ. ಅಂತಹ ವ್ಯಕ್ತಿಯಿಂದ ಅರ್ಹತಾಪತ್ರ ಪಡೆದು ಅರ್ಜಿ ಸಲ್ಲಿಸಿರುವ ಅರ್ಜಿದಾರರುಗಳು ಯಾರೆಂಬ ಬಗ್ಗೆ ಸರ್ಕಾರಕ್ಕೆ ದೂರು ಬಂದಿಲ್ಲ. ಅವರ ಬಗ್ಗೆ ಮಾಹಿತಿ ಸಿಕ್ಕಿದರೆ ತನಿಖೆ ನಡೆಸಿ ಕಾನೂನಿನ್ವಯ ಕ್ರಮ ತೆಗೆದುಕೊಳ್ಳಲಾಗುವುದು ಸರ್ಕಾರವು ಹೊರಡಿಸಿದ ಆದೇಶದಂತೆ ೧೮ ಜನ ಶಿಬಿರಾಧಿಪತಿಗಳಿಗೆ ಮನ್ನಣೆ ನೀಡಿದ್ದು, ಅವರಲ್ಲಿ ಬೊಟ್ಟಿ ಶಿಬಿರಾಧಿಪತಿಗಳು ಯಾರೂ ಇರುವುದಿಲ್ಲ. ಈ ಕಾರಣಗಳಿಂದ ಈ ಹಂತದಲ್ಲಿ ಯಾವುದೇ ರೀತಿಯ ಸಿ.ಒ.ಡಿ. ತನಿಖೆ ನಡೆಸುವ ಅಗತ್ಯ ಕಂಡುಬರುವುದಿಲ್ಲ.

೨–೩೦ ಪಿ. ಎಂ

ಶ್ರೀ ಜ್ಞಾನದೇವ ಎಸ್. ದೊಡ್ಡಮೇಟಿ.—ಇದರಲ್ಲಿ ಅವರು ಓದಿದ್ದು ಏನೂ ಬಂದಿಲ್ಲ. ಈ ಹದಿನೆಂಟು ಮಂದಿ ಶಿಬಿರಾಧಿಪತಿಗಳು ಏನಿದ್ದಾರೆ, ಇವರ ಅಸ್ತಿತ್ವವನ್ನೇ ಬಾಬುರೆಡ್ಡಿಯವರು ಪ್ರಶ್ನೆ ಮಾಡಿದ್ದರು.

ಅಧ್ಯಕ್ಷರು.—ಈಗ ಮಾನ್ಯ ಭೂಪತಿಯವರು ಇಲ್ಲಿ ಇಲ್ಲ. ಈ ದಿನ ನಿಯಮ ಷಿಷಿಳರ ಸೂಚನೆಗಳು ೨೨ ಆಯಿತು ಒಂದೊಂದು ದಿನ ಷಿರವರೆಗೂ ಇಟ್ಟಿದ್ದೇವೆ. ಇದರ ಬಗ್ಗೆ ಅನೇಕ ಮಂತ್ರಿಗಳಿಂದ ಭರವಸೆಯನ್ನು ಕೊಟ್ಟಿದ್ದಾರೆ. ಆ ಭರವಸೆಯನ್ನು ಈಡೇರಿಸಿ ಕೊಟ್ಟಿದ್ದಾರೆ, ಕೆಲವಕ್ಕೆ ಉತ್ತರಗಳನ್ನೂ ಕೂಡಾ ಕೊಟ್ಟಿದ್ದಾರೆ. ಪ್ರತಿದಿನ ಎರಡು, ಮೂರು ಅಥವಾ ಐದನ್ನು ನಿಯಮ ಷಿಷಿಳರ ಸೂಚನೆಗಳನ್ನು ಇಡಬೇಕೆಂದು ಇತ್ತು. ಆದರೆ ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ವಿರೋಧಪಕ್ಷದ ನಾಯಕರು ಎಲ್ಲರೂ ಮಾತನಾಡಿದ ಮೇಲೆ, ಅವರು ಒಂದು ದಿವಸಕ್ಕೆ ಎಷ್ಟಾಗುತ್ತದೆ ಅಷ್ಟು ನಿಯಮ ಷಿಷಿಳರ ನೋಟೀಸ್‌ಗಳನ್ನ ಇಡೋಣ ಎಂದು ಹೇಳಿದಮೇಲೆ ಎಲ್ಲವನ್ನೂ